ತಕ್ಷಣವೇ ಶೂರು ಮಾಡಬೇಕೆಂದರೆ, ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಇನ್ನು 4 ನಿಮಿಷಗಳು ಉಳಿದಿವೆ, ನಾನು ಮೊದಲಿನಿಂದ ಕೇಳಿಕೊಂಡು ಬರುತ್ತೇನೆ.

ಹುಕ್ಕೇರಿ ಪಟ್ಟಣಕ್ಕೆ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ

582 (5283) : ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಬೆಳಗಾವಿ ಜಿಲ್ಲೆ, ಹುಕ್ಕೇರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಡಿಯುವ ನೀರಿನ ದೃಷ್ಟಿಯಿಂದ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣಾ ಟ್ಯಾಂಕ್ ನಿರ್ಮಾಣದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;
2. ಸರ್ಕಾರಕ್ಕೆ ಈ ಪ್ರಸ್ತಾವನೆಯಡಿಯಲ್ಲಿ, ತಗಲುವ ಅಂದಾಜು ವೆಚ್ಚ ರೂ. 80.00 ಲಕ್ಷಗಳು ನೀಡಲಾಗಿದೆಯೇ?
3. ಸದರಿ ಟ್ಯಾಂಕ್ ನಿರ್ಮಾಣಕ್ಕೆ ಜಾಲಾವಕಾಶ ನಿಗದಿಪಡಿಸಲಾಗಿದೆಯೇ?
4. ಸದರಿ ನಿರ್ಮಾಣ ಕಾರ್ಯವು, ಕಳಪೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಯವರು):

1. – ಇಲ್ಲ –
2. ಉದ್ಭವಿಸುವುದಿಲ್ಲ.
3. ಉದ್ಭವಿಸುವುದಿಲ್ಲ.
4. ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಈ ಉತ್ತರವನ್ನು ಗಮನಿಸಿದರೆ, ಸದನಕ್ಕೆ ಪೂರ್ತಿಯಾಗಿ ತಪ್ಪು ಮಾಹಿತಿ ಕೊಡುವಂತಹ ಉತ್ತರವೆಂದು ನನಗನ್ನಿಸುತ್ತದೆ. ಹುಕ್ಕೇರಿ ಕುಡಿಯುವ ನೀರಿನ ಬಗ್ಗೆ ಈಗಾಗಲೇ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದಿದೆ. ಹುಕ್ಕೇರಿ ಮತ್ತು ಸಂಕೇಶ್ವರ ಸೇರಿದಂತೆ 16 ಹಳ್ಳಿಗಳಿಗೆ ಹಿಡ್ಕಲ್ ಜಲಾಶಯದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕಳೆದ 5 ವರ್ಷಗಳ ಹಿಂದೆ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಯೋಜನೆಯನ್ನು ಮಾಡಲಾಗಿದೆ. ನೀರನ್ನು ಸಂಗ್ರಹಿಸಲು ಯೋಗ್ಯವಾದಂತಹ ಟ್ಯಾಂಕ್ ಇಲ್ಲ. ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದು 2 ವರ್ಷಗಳ ಮೇಲಾದರೂ ಕೂಡ ಇದುವರೆಗೂ ಪ್ರಸ್ತಾವನೆ ಬಂದಿಲ್ಲವೆಂದು ಹೇಳುತ್ತಾರೆ. ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದ ಉತ್ತರವನ್ನು ನೋಡಿದರೆ ಇದು ಸರಿಯಾದ ಉತ್ತರವಲ್ಲವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಈ ಎಲ್ಲಾ ಯೋಜನೆಗಳು ಪೂರ್ತಿಯಾಗಿವೆ. ಕುಡಿಯುವ ನೀರಿಗಾಗಿ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರನ್ನು ತಂದಿದ್ದೇವೆ. ಆದರೆ ನೀರನ್ನು ಸಂಗ್ರಹಿಸುವುದಕ್ಕೆ ಟ್ಯಾಂಕ್ ಇಲ್ಲದೇ ಇರುವುದರಿಂದ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತಿಲ್ಲ ಎಂದು ಹೇಳಿದ್ದಾರೆ.

ಆದ್ದರಿಂದ ಈ ಪ್ರಸ್ತಾವನೆಯನ್ನು ಕೂಡಲೇ ತರಿಸಿಕೊಂಡು ಅದಕ್ಕೆ ಮೊದಲ ಆದ್ಯತೆಯನ್ನು ಕೊಡುವಂತಹದ್ದು ಆಗಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, 18ನೇ ಏಪ್ರಿಲ್ 2003 ರಂದು ಮಾನ್ಯ ಸದಸ್ಯರು 5 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ನೀರು ಸಂಗ್ರಹಣ ಟ್ಯಾಂಕನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಾಣ ಮಾಡಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಈಗ ಅಲ್ಲಿ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣ ಸಾಮರ್ಥ್ಯವಿದೆ, ಅದನ್ನು ಈಗ 5 ಲಕ್ಷ ಗ್ಯಾಲನ್ ಗೆ ಏರಿಸಬೇಕೆಂದು ತಾವು ಏನು ವಿನಂತಿಯನ್ನು ಮಾಡಿಕೊಂಡಿದ್ದೀರಿ, ಅದಕ್ಕೆ ಅಂದಾಜು ಪತ್ರಿಕೆಯನ್ನು ತಯಾರು ಮಾಡಿ ಎಂದು ಹೇಳಿ ನೀರು ಮತ್ತು ಒಳಚರಂಡಿ ಮಂಡಳಿಗೆ ಈಗಾಗಲೇ ನಾವು ಸೂಚನೆಯನ್ನು ಕೊಟ್ಟಿದ್ದೇವೆ,

ಶ್ರೀ ಉಮೇಶ್ ವಿ. ಕತ್ತಿ : ಅದನ್ನು ಕೂಡಲೇ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಲ್ಲಿ ಕುಡಿಯುವ ನೀರು ಬರುತ್ತಿದೆ, ಆದರೆ ನೀರು ಸಂಗ್ರಹ ಮಾಡುವುದಕ್ಕೆ ನೀರಿಲ್ಲ. ಇವತ್ತು ನಮ್ಮ ಹುಕ್ಕೇರಿ ನಗರದಲ್ಲಿ 40 ಸಾವಿರದಷ್ಟು ಜನಸಂಖ್ಯೆ ಇದೆ, ಆ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣ ಟ್ಯಾಂಕ್ ನಿಂದ ನೀರು ಸರಬರಾಜು ಆಗುತ್ತಿಲ್ಲ. ಡೇ ಅಂಡ್ ನೈಟ್ ಕೆಲಸ ಮಾಡಿದರೂ ನೀರನ್ನು ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಆದಷ್ಟು ಬೇಗ ಅಂದಾಜು ಪತ್ರಿಕೆಯಾಗಿ ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾಡಿಕೊಡುತ್ತೇವೆ.

ಮಹಾನಗರ ಪಾಲಿಕೆ ನೌಕರರ ವರ್ಗಾವಣೆ

587 (5033) : **ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್)** : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳ ಮಾದರಿಯಲ್ಲಿ ಮಹಾನಗರ ಪಾಲಿಕೆ ನೌಕರರನ್ನು ಕೂಡ ವರ್ಗಾವಣೆ ವ್ಯಾಪ್ತಿಗೆ ತರಲು ಸರ್ಕಾರ ಯೋಚಿಸಿದೆಯೆ;

ಆ) ನಗರ ಪಾಲಿಕೆ ನೌಕರರು ಪ್ರಾರಂಭದಿಂದ ನಿವೃತ್ತಿಯವರೆಗೆ ಒಂದೇ ನಗರ ಪಾಲಿಕೆಯಲ್ಲಿ ಕೆಲಸ ಮಾಡುವುದರಿಂದ ಅವರು ಸ್ಥಾಪಿತ ಹಿತಾಸಕ್ತಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ನಗರ ಪಾಲಿಕೆಯ ಆಡಳಿತ ಹೆಚ್ಚು ಜನಪರವಾಗುವ ದಿಸೆಯಲ್ಲಿ ವರ್ಗಾವಣೆಯ ಕ್ರಮವನ್ನು ಸರ್ಕಾರ ಕೈಗೊಳ್ಳುವುದೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಬಂದಿದೆ.

ಇ) ಪರಿಶೀಲನೆಯಲ್ಲಿದೆ.